# ಲೈಂಗಿಕ ಅಪರಾಧಗಳಿಂದ
# ಮಕ್ಕಳ ರಕ್ಷಣಾ ಕಾಯ್ದೆ 2012 (ಪೋಕ್ಸೋ)

ಮಕ್ಕಳೆಂದರೆ ದೇವರು, ಆದ್ದರಿಂದಲೇ ಮಕ್ಕಳಿರಲಿ ಮನೆ ತುಂಬಾ ಎನ್ನುವ ದೇಶ ನಮ್ಮದು. ಆದರೆ ಈಗ ಎಲ್ಲವೂ ಬದಲಾಗುತ್ತಿದೆ. ಇಂತಹ ಮಕ್ಕಳನ್ನೇ, ಕಾಮದ ವಸ್ತುವನ್ನಾಗಿ ನೋಡುವ ವಿಕೃತ ಮನಸ್ಸಿನ ಜನರು ಹೆಚ್ಚಾಗುತ್ತಿದ್ದಾರೆ. ಸಂಬಂಧಗಳ ಬಗ್ಗೆ ನಮಗಿರುವ ನಂಬಿಕೆಗಳಿಂದಲೇ ದೌರ್ಜನ್ಯಗಳು ನಡೆದರೂ ಗಮನಕ್ಕೆ ಬರುವುದಿಲ್ಲ. ದೌರ್ಜನ್ಯಕ್ಕೊಳಗಾದವರಿಗೆ ಕಳಂಕ ಅಂಟಿಸುವ ನಮ್ಮ ವ್ಯವಸ್ಥೆಯು ಇದಕ್ಕೆ ಕಾರಣ. ಬಡವ ಶ್ರೀಮಂತ ಎನ್ನುವ ಬೇಧವಿಲ್ಲ. ಆದರೆ ಪೋಷಕರಿಂದ ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳ ಮೇಲೆಯೇ ದೌರ್ಜನ್ಯ ಹೆಚ್ಚಾಗುತ್ತಿದೆ. ಇವರು ಸುಲಭವಾಗಿ ಎಲ್ಲವನ್ನೂ ನಂಬಿ ಬಿಡುತ್ತಾರೆ. ಇನ್ನೂ ಜಗತ್ತನ್ನು ಅರಿಯದ ಮಗು ಇಂಥ ಕ್ರೌರ್ಯದಿಂದ ಬಾಲ್ಯವನ್ನು ಕಳೆದುಕೊಳ್ಳುತ್ತದೆ. ಮಕ್ಕಳೇ ಪ್ರತಿಭಟಿಸುವವರೆಗೆ, ಪೋಷಕರೇ ಎದ್ದು ನಿಲ್ಲುವವರೆಗೆ ಮತ್ತು ದೌರ್ಜನ್ಯವೆಸಗಿದ ವ್ಯಕ್ತಿಯ ವಿರುದ್ಧ ಎಲ್ಲಿಯವರೆಗೆ ದೂರು ದಾಖಲು ಮಾಡುವುದಿಲ್ಲವೋ ಅಲ್ಲಿಯವರೆಗೆ ಕ್ರೌರ್ಯಕ್ಕೆ ಕೊನೆಯಿಲ್ಲ.

'ಲೈಂಗಿಕ ಶೋಷಣೆಯಿಂದ ಮಕ್ಕಳನ್ನು ಹೇಗೆ ರಕ್ಷಿಸಬೇಕು' ಎನ್ನುವುದು ಇತ್ತೀಚಿನ ದಿನಗಳಲ್ಲಿ ಅತ್ಯಂತ ಹೆಚ್ಚು ಆತಂಕ ಒಡ್ಡಿರುವ ವಿಚಾರ. ಇದು ಕೇವಲ ಹೆಣ್ಣು ಮಕ್ಕಳಿಗೆ ಮಾತ್ರ ಸೀಮಿತವಾಗಿಲ್ಲ. ಗಂಡು ಮಕ್ಕಳಿಗೂ ಅಷ್ಟೇ ಪ್ರಸ್ತುತ. ಈ ವಿಷಯ ಎಷ್ಟೊಂದು ಸೂಕ್ಷ್ಮ ಎಂದರೆ, ಬೇರೆ ಅಪರಾಧಿಗಳಿಗೆ ಹೋಲಿಸಿ ನೋಡಿದರೆ ಈ ಪ್ರಕರಣಗಳು ಬೆಳಕಿಗೆ ಬರುವುದು ಕೇವಲ 3 ರಿಂದ 5 ಪ್ರತಿಶತ ಮಾತ್ರ. ಮಕ್ಕಳ ಮೇಲೆ ನಡೆಯುವ ಈ ಲೈಂಗಿಕ ಶೋಷಣೆಯ ಪ್ರಕರಣಗಳು ಬಹುತೇಕ ಮುಚ್ಚಿ ಹಾಕಲ್ಪಡುತ್ತವೆ.

ಮಗುವಿನ ಹಿತರಕ್ಷಣೆಗಾಗಿ 20ನೇ ನವೆಂಬರ್ 1989ರಲ್ಲಿ ವಿಶ್ವ ಸಂಸ್ಥೆಯು ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸಿತು. ಭಾರತ ಘನ ಸರಕಾರವು 11ನೇ ಡಿಸೆಂಬರ್ 1992ರಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಿತು. ಮಗುವಿನ ಗೌಪ್ಯತೆ ಮತ್ತು ಏಕಾಂತತೆಯ ಹಕ್ಕನ್ನು ಕಾಪಾಡುವುದು ಹಾಗೂ ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ. ಮಗುವಿನ ಹಿತದೃಷ್ಟಿ ಮತ್ತು ಆರೋಗ್ಯಕರ ಬೆಳವಣಿಗೆಗೆ ಪ್ರತೀ ಹಂತದಲ್ಲೂ ಮಗುವಿನ ದೈಹಿಕ, ಮಾನಸಿಕ, ಭಾವನಾತ್ಮಕ, ಬೆಳವಣಿಗೆಗೆ ಮಹತ್ವವನ್ನು ನೀಡುತ್ತದೆ.

ಮಕ್ಕಳ ಮೇಲೆ ಹಲವು ಸಲ ರಕ್ಷಕರೇ ದೌರ್ಜನ್ಯ ಎಸಗಿದಾಗ ಇವುಗಳನ್ನು ವಿಪರೀತ (ಅಗ್ರವೇಟೆಡ್) ಅಥವಾ ಘೋರ ಅಪರಾಧವೆಂದು ಪರಿಗಣಿಸಲಾಗಿದೆ. ಅಪರಾಧಗಳ ಪ್ರಮಾಣಕ್ಕೆ ಅನುಗುಣವಾಗಿ ಶಿಕ್ಷೆಯೂ ಜಾಸ್ತಿಯಾಗುತ್ತಾ ಹೋಗುತ್ತದೆ. ಇವುಗಳನ್ನೆಲ್ಲಾ ಪ್ರತ್ಯೇಕವಾಗಿ ಈ ಕೆಳಗೆ ವಿವರಿಸಲಾಗಿದೆ. ಈ ನಿಟ್ಟಿನಲ್ಲಿ 2012ರಲ್ಲಿ POCSO ಕಾಯಿದೆ ಜಾರಿ ಬಂದಿರುತ್ತದೆ. ಈ ಕಾಯಿದೆಯ ಪ್ರಕಾರ ಮಕ್ಕಳ ಮೇಲೆ ಲೈಂಗಿಕ ಅಪರಾಧ ಎಂದರೆ

## A. ಭೇದಕ/ಹತ ಸಂಭೋಗ ಲೈಂಗಿಕ ದೌರ್ಜನ್ಯ (Penetrative sexual assault) ಕಲಂ - 3

ಯಾವುದೇ ಒಂದು ಹೆಣ್ಣು ಮಗುವಿನ ಯೋನಿ, ಬಾಯಿ, ಗುದದ್ವಾರಕ್ಕೆ ಶಿಶ್ನ ಅಥವಾ ಯಾವುದೇ ಇತರ ವಸ್ತುಗಳನ್ನು ತೂರಿಸಿದರೆ ಅಥವಾ ದೇಹದ ಯಾವುದೇ ಭಾಗವನ್ನು ದುರುಪಯೋಗಪಡಿಸಿ ತೂರಿಸುವಿಕೆಯನ್ನು ಸಾಧ್ಯ ಮಾಡಿದರೆ, ಹಾಗೆಯೇ ಯಾವುದೇ ಒಂದು ಗಂಡು ಮಗುವಿನೊಂದಿಗೆ ಬಾಯಿ, ಗುದದ್ವಾರದ ಮೂಲಕ ಲೈಂಗಿಕ ಕ್ರಿಯೆಗೆ ತೊಡಗಿದರೆ ಅಥವಾ ಆ ಮಗುವಿನಿಂದ ಅದನ್ನು ಮಾಡಿಸಿಕೊಂಡರೆ ಅದು 'ಭೇದಕ / ಹತ ಸಂಭೋಗ ಲೈಂಗಿಕ ದೌರ್ಜನ್ಯ' ಎನಿಸಿಕೊಳ್ಳುವುದು ಇಂಥ ಅಪರಾಧ ಎಸಗುವವರು ಏಳು ವರ್ಷಗಳಿಂದ ಜೀವಾವಧಿವರೆಗಿನ ಶಿಕ್ಷೆಗೆ ಅರ್ಹರಾಗುವರು.

## B. ಘೋರ ರೀತಿ ತೂರಿಸುವ ಮೂಲಕ ಲೈಂಗಿಕ ದೌರ್ಜನ್ಯ (Aggravated penetrative sexual assault) ಕಲಂ - 5

ಈ ಮೇಲಿನ ಅಪರಾಧವನ್ನು ಈ ಕೆಳಗಿನ ವ್ಯಕ್ತಿಗಳು, ಈ ಕೆಳಗಿನ ಸಂದರ್ಭಗಳಲ್ಲಿ ನಡೆಸಿದರೆ ಅದನ್ನು ಘೋರ ಅಪರಾಧವೆಂದು ಪರಿಗಣಿಸಲಾಗುತ್ತದೆ.

➢ **ಯಾವ ವ್ಯಕ್ತಿಗಳು?**

- ಪೋಲೀಸ್ ಅಧಿಕಾರಿ ತನ್ನ ವ್ಯಾಪ್ತಿಯೊಳಗೆ ಕರ್ತವ್ಯ ನಿರ್ವಹಿಸುತ್ತಿರುವ ಸಮಯದಲ್ಲಿ
- ಭದ್ರತಾ ಅಧಿಕಾರಿ ತನ್ನ ಕಾರ್ಯ ಕ್ಷೇತ್ರ ಅಥವಾ ಹೊರಗಡೆ
- ಸರಕಾರಿ ನೌಕರ, ಸೆರೆಮನೆಯ ಅಧಿಕಾರಿ, ಪರಿವೀಕ್ಷಣಾಧಿಕಾರಿ ಅಥವಾ ಮಕ್ಕಳ ರಕ್ಷಣೆಯ ಜವಾಬ್ದಾರಿ ಹೊತ್ತಿರುವ ವ್ಯಕ್ತಿ
- ಕುಟುಂಬದ ಸದಸ್ಯರು

➢ **ಯಾವ ಸಂದರ್ಭಗಳಲ್ಲಿ?**

- ಒಂದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಸೇರಿ ಈ ದೌರ್ಜನ್ಯ ಎಸಗಿದಾಗ
- ಮಗುವನ್ನು ಗರ್ಭ ಧರಿಸುವಂತೆ ಮಾಡಿದಾಗ
- ಗರ್ಭಿಣಿಯಾದ ಮಗುವಿನ ಮೇಲೆ ಈ ದೌರ್ಜನ್ಯ ಎಸಗಿದಾಗ
- 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಾಗಿದ್ದ ಸಂದರ್ಭದಲ್ಲಿ
- ಈ ಕೃತ್ಯದಿಂದ ಮಗುವಿಗೆ ಹೆಚ್. ಐ. ವಿ. ಸೋಂಕು ಬಂದಲ್ಲಿ
- ದೈಹಿಕ ಅಥವಾ ಮಾನಸಿಕ ಅಂಗವಿಕಲತೆಯುಳ್ಳ ಮಗುವಿನ ಮೇಲೆ
- ಪದೇ ಪದೇ ಮಗುವಿನ ಮೇಲೆ ಈ ಕೃತ್ಯ ನಡೆಸಿದಲ್ಲಿ
- ಬೆಂಕಿ, ಕೆರೊಸಿನ್ / ಕಾಯಿಸಿದ ವಸ್ತು ಅಥವಾ ಆಯುಧಗಳನ್ನು ಬಳಸಿದಲ್ಲಿ
- ಇಂಥ ದೌರ್ಜನ್ಯ ಎಸಗಲು ಮಗುವನ್ನು ಹತ್ಯೆ ಮಾಡಲು ಪ್ರಯತ್ನಿಸಿದಲ್ಲಿ
- ಕೋಮು, ಜಾತಿ ಗಲಭೆಗಳ ಸಂದರ್ಭಗಳಲ್ಲಿ

**ಅಪರಾಧಿಗಳಿಗೆ ಕಠಿಣವಾದ 10 ವರ್ಷದ ಸೆರೆವಾಸದಿಂದ ಹಿಡಿದು ಜೀವಾವಧಿ ಶಿಕ್ಷೆ ಹಾಗೂ ಜುಲ್ಮಾನೆಯನ್ನು ವಿಧಿಸಲಾಗುವುದು.**

## C. ಲೈಂಗಿಕ ದೌರ್ಜನ್ಯ (Sexual assault) - ಕಲಂ 7

ಲೈಂಗಿಕ ಉದ್ದೇಶದಿಂದ ಯಾವುದೇ ವ್ಯಕ್ತಿಯು ಮಗುವಿನ ಯೋನಿ, ಶಿಶ್ನ, ಮೊಲೆಗಳನ್ನು ಸ್ಪರ್ಶಿಸುವುದು ಅಥವಾ ಮಕ್ಕಳಿಂದ ತನ್ನ ದೇಹದ ಭಾಗಗಳನ್ನು ಮುಟ್ಟಿಸಿಕೊಳ್ಳುವುದನ್ನು ಲೈಂಗಿಕ ದೌರ್ಜನ್ಯ ಎಂದು ಕರೆಯಲಾಗುವುದು. ದೌರ್ಜನ್ಯ ಎಸಗಿದವರಿಗೆ ಮೂರು ವರ್ಷದಿಂದ ಐದು ವರ್ಷದವರೆಗೆ ಸೆರೆವಾಸ ಹಾಗೂ ಜುಲ್ಮಾನ ವಿಧಿಸಲಾಗುವುದು.

## D. ತೀವ್ರ/ಅತಿರೇಕದ ರೀತಿಯ ಲೈಂಗಿಕ ದೌರ್ಜನ್ಯ - ಕಲಂ 9

ಯಾವುದೇ ವ್ಯಕ್ತಿ ಅಧಿಕಾರದಿಂದ ಪ್ರಭಾವ ಬೀರಿ ಲೈಂಗಿಕ ದೌರ್ಜನ್ಯವೆಸಗಿದಾಗ ಈ ಅಪರಾಧವು ತೀವ್ರ/ಅತಿರೇಕ ರೀತಿಯ ಲೈಂಗಿಕ ದೌರ್ಜನ್ಯ (Aggravated sexual assault) ಎಂದು ಪರಿಗಣಿಸಲ್ಪಡುತ್ತದೆ. ಇದಕ್ಕೆ 5 ವರ್ಷದಿಂದ 7 ವರ್ಷದ ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುವುದು. (ಕಲಂ 10)

## E. ಲೈಂಗಿಕ ಕಿರುಕುಳ (Sexual harassment) - ಕಲಂ 11

ಲೈಂಗಿಕ ಉದ್ದೇಶದಿಂದ, ಶಬ್ದ ಮಾಡುವ ಮೂಲಕ ಯಾವುದೇ ಮಗುವಿನ ಗಮನ ಸೆಳೆದರೆ, ಅಸಭ್ಯವಾಗಿ ವರ್ತಿಸಿದರೆ, ತನ್ನ ದೇಹ ಪ್ರದರ್ಶನ ಮಾಡಿದರೆ, ಮಗುವನ್ನು ಹಿಂಬಾಲಿಸಿದರೆ, ಮಗುವನ್ನು ನೇರವಾಗಿ ಅಥವಾ ವಿದ್ಯುನ್ಮಾನ

ಮಾಧ್ಯಮದ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರೆ ಅಥವಾ ಮಗುವಿಗೆ ಭಯ ಹುಟ್ಟಿಸಿದರೆ ಅದನ್ನು ಲೈಂಗಿಕ ಕಿರುಕುಳ ಎಂದು ಕರೆಯಲಾಗುವುದು. ಈ ಕಿರುಕುಳ ನಡೆಸಿದವರಿಗೆ ಮೂರು ವರ್ಷದವರೆಗೆ ಸೆರೆವಾಸ ಹಾಗೂ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಲಾಗುವುದು.

**ಮಗುವನ್ನು ಲೈಂಗಿಕ ಚಿತ್ರ ತಯಾರಿಸುವುದರಲ್ಲಿ ಬಳಸುವುದು- ಕಲಂ 13 ಮತ್ತು ಕಲಂ 15 (Chapter 3)**

ಯಾವುದೇ ವ್ಯಕ್ತಿಯು ಒಂದು ಮಗುವನ್ನು ಬಳಸಿ ನೀಲಿ ಚಿತ್ರ ತಯಾರಿಸಿ, ಅದನ್ನು ಮುದ್ರಿಸಿ, ಚಿತ್ರಿಸಿ ಅಥವಾ ಅಂತರ್ಜಾಲದ ಮೂಲಕ ಪಸರಿಸಿದರೆ ಅದೂ ಅಪರಾಧವೆನಿಸುವುದು. ಲೈಂಗಿಕ ಚಿತ್ರೀಕರಣಕ್ಕಾಗಿ ಆ ಮಗುವಿನೊಡನೆ ನೇರವಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿದರೆ ಅದು ತೂರಿಸುವಿಕೆಯ ಅಪರಾಧವಾಗಿದ್ದು ಅದಕ್ಕೆ ಸಂಬಂಧಿಸಿದ ಶಿಕ್ಷೆಯನ್ನು ವಿಧಿಸಲಾಗುವುದು. ಲೈಂಗಿಕ ಚಿತ್ರೀಕರಣದ ಪರಿಕರಗಳನ್ನು ಸಂಗ್ರಹಿಸಿಟ್ಟವರಿಗೂ ಈ ಕಾನೂನಿನಡಿಯಲ್ಲಿ ಶಿಕ್ಷೆ ಇದೆ.

ಈ ಅಪರಾಧಗಳನ್ನು ಅಧಿಕಾರದಲ್ಲಿರುವವರು ಅಥವಾ ಮಕ್ಕಳ ರಕ್ಷಣೆಯ ಜವಾಬ್ದಾರಿ ಹೊತ್ತಿರುವವರು ಮಾಡಿದ್ದಲ್ಲಿ ಅಥವಾ ಕುಟುಂಬದ ಸದಸ್ಯರೇ ಭಾಗಿಯಾಗಿದ್ದಲ್ಲಿ ಅವರೆಲ್ಲರೂ ಹೆಚ್ಚಿನ ಶಿಕ್ಷೆಗೆ ಗುರಿಯಾಗುವರು.

ಈ ಮೇಲಿನ ಎಲ್ಲಾ ಅಪರಾಧಗಳನ್ನು ಮಾಡಲು ಪ್ರಚೋದನೆ ನೀಡಿದ, ಸಹಾಯ ಮಾಡಿದ ಅಥವಾ ಯಾವುದೇ ರೀತಿಯಲ್ಲಿ ಭಾಗಿಯಾದ ಎಲ್ಲರೂ ಅಪರಾಧಿಗಳೆನಿಸುವರು. ಈ ಅಪರಾಧಗಳು ನಡೆದ ಬಗ್ಗೆ ಮಾಹಿತಿ ಇದ್ದು, ಇದಕ್ಕೆ ಸಂಬಂಧಿಸಿದ ದೂರು ಕೊಡದವರೂ ಕೂಡಾ ತಪ್ಪಿತಸ್ಥರು. ನೇರವಾಗಿ ಅಪರಾಧ ಮಾಡಿದವರಿಗೆ ನೀಡುವ ಶಿಕ್ಷೆಯ ಅರ್ಧದಷ್ಟನ್ನು ಇವರು ಅನುಭವಿಸಬೇಕು.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಲೈಂಗಿಕ ಕಿರುಕುಳ, ಲೈಂಗಿಕ ಚಿತ್ರ ಪ್ರದರ್ಶನ ಇಂಥ ಅಪರಾಧಗಳನ್ನು ತಡೆಯಲು ಪೋಕ್ಸೋ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಇಂತಹ ಪ್ರಕರಣಗಳನ್ನು ವಿಚಾರಣೆ ಮಾಡಲು ವಿಶೇಷ ನ್ಯಾಯಾಲಯಗಳನ್ನು ರಚಿಸಲಾಗಿದೆ.

| ಅಪರಾಧ | ಶಿಕ್ಷೆ |
|---|---|
| ಕಲಂ 3 : ಭೇದಕ/ಹಠ ಸಂಭೋಗ ಲೈಂಗಿಕ ದೌರ್ಜನ್ಯ | ಕಲಂ 4 : 7 ವರ್ಷ ಶಿಕ್ಷೆ - ಜೀವಾವಧಿ ಶಿಕ್ಷೆ ಮತ್ತು ದಂಡ |
| ಕಲಂ 5 : ಯಾವುದೇ ವ್ಯಕ್ತಿ ಅಧಿಕಾರದಿಂದ ಪ್ರಭಾವ ಬೀರಿ ಸಂಭೋಗಿಸಿದ ಲೈಂಗಿಕ ದೌರ್ಜನ್ಯ | ಕಲಂ 6 : 10 ವರ್ಷ ಶಿಕ್ಷೆ - ಜೀವಾವಧಿ ಶಿಕ್ಷೆ ಮತ್ತು ದಂಡ |
| ಕಲಂ 7 : ಲೈಂಗಿಕ ದೌರ್ಜನ್ಯ | ಕಲಂ 8 : 3 ವರ್ಷದಿಂದ 5 ವರ್ಷ ಶಿಕ್ಷೆ ಮತ್ತು ದಂಡ |
| ಕಲಂ 9 : ಯಾವುದೇ ವ್ಯಕ್ತಿ ಅಧಿಕಾರದಿಂದ ಪ್ರಭಾವ ಬೀರಿ ಲೈಂಗಿಕ ದೌರ್ಜನ್ಯ | ಕಲಂ 10 : 5 ವರ್ಷದಿಂದ 7 ವರ್ಷ ಶಿಕ್ಷೆ ಮತ್ತು ದಂಡ |
| ಕಲಂ 11 : ಲೈಂಗಿಕ ಕಿರುಕುಳ | ಕಲಂ 12 : 3 ವರ್ಷದವರೆಗೆ ಶಿಕ್ಷೆ ಮತ್ತು ದಂಡ<br>ಮೊದಲನೇ ತಪ್ಪಿಗೆ 5 ವರ್ಷದವರೆಗೆ ಶಿಕ್ಷೆ ಮತ್ತು ದಂಡ<br>ಎರಡನೇ ತಪ್ಪಿಗೆ 7 ವರ್ಷದವರೆಗೆ ಶಿಕ್ಷೆ ಮತ್ತು ದಂಡ |
| ಕಲಂ 13 : ಮಕ್ಕಳನು ಲೈಂಗಿಕ ಚಿತ್ರಗಳಲ್ಲಿ ಬಳಕೆ | ಕಲಂ 14 : 3 ವರ್ಷದವರೆಗೆ ಶಿಕ್ಷೆ ಮತ್ತು ದಂಡ ಅಥವಾ ಎರಡೂ |
| ಕಲಂ 15 : ಮಕ್ಕಳಿಗೆ ಸಂಬಂಧಿಸಿದ ಅಶ್ಲೀಲ ವಸ್ತುಗಳನ್ನು ಸಂಗ್ರಹಿಸುವುದು. | ಕಲಂ 15 : 3 ವರ್ಷದವರೆಗೆ ಶಿಕ್ಷೆ ಅಥವಾ ದಂಡ ಅಥವಾ ಎರಡೂ |

**ಹೆಚ್ಚಿನ ಮಾಹಿತಿಗಾಗಿ ಪೋಕ್ಸೋ ಕಾಯಿದೆ 2012 (POCSO ACT 2012)ರ ಮೂಲ ಪ್ರತಿಯನ್ನು ನೋಡುವುದು.**

# ಏನಿದು 'ಶಿಕ್ಷಣ ಸಂಪನ್ಮೂಲ ಕೇಂದ್ರ'?

**'ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಪೋಷಕರು, ಶಿಕ್ಷಕರು ಸಂಘ ಸಂಸ್ಥೆಗಳು, ಜನಪ್ರತಿನಿಧಿಗಳನ್ನೊಳಗೊಂಡ ಸಮುದಾಯ ಆಧಾರಿತ ವೇದಿಕೆ'**

ವ್ಯಕ್ತಿ ಮತ್ತು ಸಮುದಾಯದ ಅಭಿವೃದ್ಧಿಯಲ್ಲಿ ಶಿಕ್ಷಣ ಅತೀ ಮುಖ್ಯ ಪಾತ್ರವಹಿಸುತ್ತದೆ. ಈ ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣವೆನ್ನುವುದು ಇಡೀ ಶಿಕ್ಷಣ ಕ್ಷೇತ್ರಕ್ಕೆ ತಳಪಾಯವಾಗಿರುವುದು. ಮಾತ್ರವಲ್ಲದೆ ಸಾಮಾಜಿಕ ಬದಲಾವಣೆಯ ಕ್ರಿಯೆಯಲ್ಲಿ ಶಿಕ್ಷಣ ಒಂದು ಪ್ರಮುಖ ಅಸ್ತ್ರವಾಗಿದೆಯೆಂಬುದು ನಮ್ಮ ಮೂಲಗ್ರಹಿಕೆಯಾಗಿದೆ.

ಈ ಹಿನ್ನೆಲೆಯೊಂದಿಗೆ ಮೌಲಿಕ ಶಿಕ್ಷಣ (ವೆಲೊರೆಡ್) ಪರಿಕಲ್ಪನೆಯೊಂದಿಗೆ ಚಿಂತನೆ ನಡೆಸಿ ಅನೇಕ ವರ್ಷಗಳಿಂದ ದ. ಕ. ಮತ್ತು ಉಡುಪಿ ಜಿಲ್ಲೆಗಳ ತಾಲೂಕುಗಳಲ್ಲಿ 'ಶಿಕ್ಷಣ ಸಂಪನ್ಮೂಲ ಕೇಂದ್ರ'ಗಳ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿಯ ಶೈಕ್ಷಣಿಕ ವಾತಾವರಣವನ್ನು ಕ್ರಿಯಾತ್ಮಕವಾಗಿಸುವ, ಸಮುದಾಯ ಮತ್ತು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ನಿರಂತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಈ ಸಂದರ್ಭದಲ್ಲಿ ಮಕ್ಕಳಿಗಾಗಿ ಕ್ರಿಯಾತ್ಮಕ ರಂಗ ಶಿಬಿರಗಳ ಆಯೋಜನೆ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಬರುವಂತೆ ಪ್ರೇರೇಪಿಸುವ ಕಾರ್ಯಕ್ರಮಗಳನ್ನು ನಡೆಸುವದು, ಗ್ರಾಮ ಮಟ್ಟದಲ್ಲಿ ಮಕ್ಕಳ ಜಾಲ ಸಂಘಟನೆ, ಶಿಕ್ಷಕರಿಗಾಗಿ ಭೌತಿಕ, ಬೌದ್ಧಿಕ ಅಭಿವೃದ್ಧಿಗೆ ಸಂಬಂಧಿಸಿ ಲಿಂಗಸೂಕ್ಷ್ಮತೆಯ ಹಿನ್ನೆಲೆಯಲ್ಲಿ ಚಿಂತನಾ ಕಾರ್ಯಾಗಾರಗಳು, ಕ್ಷೇತ್ರ ವೀಕ್ಷಣೆ – ಪುನರ್ ವಿಮರ್ಶೆ, ಕಲಿಕೆಯಲ್ಲಿ ಕ್ರಿಯಾತ್ಮಕತೆ, ಶಿಶು ಕೇಂದ್ರಿತ ಚಟುವಟಿಕೆ ಆಧಾರಿತ, ಶೈಕ್ಷಣಿಕ ಸಂಶೋಧನೆಗಳನ್ನು ಆಯೋಜಿಸಲಾಗಿದೆ.

ಅದೇ ರೀತಿ ಸಮುದಾಯಕ್ಕಾಗಿ ಶಾಲೆಗಳಲ್ಲಿ ಸ್ಥಳೀಯ ಸಮುದಾಯ ಹಾಗೂ ಸಂಘ ಸಂಸ್ಥೆಗಳ ಪಾತ್ರ ಸ್ಪಷ್ಟಪಡಿಸಲು ಮಾಹಿತಿ ಕಾರ್ಯಾಗಾರಗಳು, ಶಾಲೆ – ಸಮುದಾಯ ಮಾಲಕತ್ವದ ಕಲ್ಪನೆ, ಸರಕಾರಿ ನೀತಿ ನಿಯಮಗಳ ಮಾಹಿತಿ ಕಾರ್ಯಾಗಾರಗಳು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪೂರಕ ವಾತಾವರಣ ನಿರ್ಮಾಣಕ್ಕೆ ಸಂಬಂಧಿಸಿ ಚರ್ಚೆ–ಚಿಂತನೆ, ಗ್ರಾಮ ಪಂಚಾಯತ್ ಸಬಲೀಕರಣ, ಶಿಕ್ಷಣಕ್ಕೆ ಸಂಬಂಧಪಟ್ಟ ಮಸೂದೆಗಳ ಕುರಿತ ಮಾಹಿತಿ ಕಾರ್ಯಾಗಾರಗಳು ಹೀಗೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಶೈಕ್ಷಣಿಕ ಹಾಗೂ ಸಾಮಾಜಿಕ ಬದಲಾವಣೆಗೆ ಈ ಎಲ್ಲಾ ಕಾರ್ಯಕ್ರಮಗಳು ಪೂರಕವಾಗಿದೆಯಾದರೂ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಇನ್ನಷ್ಟು ಪ್ರಬಲವಾಗಿ, ಆಂದೋಲನ ರೂಪದಲ್ಲಿ ಬೆಳೆದಾಗ ಮಾತ್ರ ಶೈಕ್ಷಣಿಕ ಕ್ಷೇತ್ರದಲ್ಲಿ ನಿರೀಕ್ಷಿತ ಬದಲಾವಣೆಯಾಗುವುದು ಎಂಬುದು ನಮ್ಮ ಗ್ರಹಿಕೆ. ಈ ನಿಟ್ಟಿನಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿರುವ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟವು ಅಸ್ತಿತ್ವಕ್ಕೆ ಬಂದಿದ್ದು, ಮುಂದೆ ರಾಜ್ಯ, ದೇಶ ವ್ಯಾಪಿಯಾಗಿ ಶೈಕ್ಷಣಿಕ ಚಳುವಳಿಯಲ್ಲಿ ಕಾರ್ಯಾಚರಿಸುತ್ತಿದೆ.

## ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ (ರಿ.) ದ.ಕ. ಮತ್ತು ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಉಡುಪಿ (ರಿ.)

**ಧ್ಯೇಯ :**

'ಶಿಕ್ಷಣ ಸಂಪನ್ಮೂಲ ಕೇಂದ್ರ'ವು ಸಾಂವಿಧಾನಿಕವಾಗಿ ಪ್ರತಿಪಾದಿತ ತತ್ತ್ವಗಳಾದ ಪ್ರಜಾಪ್ರಭುತ್ವ, ಸಮಾನತೆ, ಜಾತ್ಯಾತೀತ ಮತ್ತು ಸಮಾಜವಾದಿ ಮೌಲ್ಯಗಳನ್ನು ಶಿಕ್ಷಣದ ರೂಪದಲ್ಲಿ ಒದಗಿಸುವ ಮೂಲಕ ಮೌಲ್ಯಾಧಾರಿತ ಸಮಾಜವನ್ನಾಗಿಸುವಲ್ಲಿ ಶ್ರಮಿಸುವುದು.

**ಉದ್ದೇಶಗಳು :**

- ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟದ ಮೌಲ್ಯಾಧಾರಿತ ಶೈಕ್ಷಣಿಕ ವಾತಾವರಣ ನಿರ್ಮಾಣವಾಗುವಂತೆ ಸಾರ್ವತ್ರಿಕ ಸದೃಢಗೊಳಿಸುವುದು.
- ಶೈಕ್ಷಣಿಕ ಕ್ಷೇತ್ರದಲ್ಲಿನ ಕಾಲಕಾಲದ ಬೇಡಿಕೆಗಳಿಗನುಸಾರವಾಗಿ ಸೂಕ್ತ ತಜ್ಞರನ್ನೊಳಗೊಂಡ ಸಮಾನಾಸಕ್ತರ ಜಾಲವನ್ನು ರೂಪಿಸುವುದು, ಈ ಮೂಲಕ ಶೈಕ್ಷಣಿಕ ಆಂದೋಲನವನ್ನು ಹಮ್ಮಿಕೊಳ್ಳುವುದು.
- ಮೌಲ್ಯಾಧಾರಿತ ಶಿಕ್ಷಣ ಅನುಷ್ಠಾನಗೊಳಿಸುವಲ್ಲಿ ಇಲಾಖೆಯೊಂದಿಗೆ ಸಹಭಾಗಿತ್ವ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಿಗಾಗಿ ಒತ್ತಾಯಿಸುವುದು.
- ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಗ್ರಾಮ ಶಿಕ್ಷಣ ಸಮಿತಿಗಳನ್ನು ಸುದೃಢಗೊಳಿಸಿ ಗ್ರಾಮ ಮಟ್ಟದಿಂದಲೇ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಗೊಳಿಸುವುದು.
- ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ, ಜಾತಿ, ಮತ, ವರ್ಗ ಭೇದವಿಲ್ಲದೆ ಸಮಾನತೆಯ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಅಳವಡಿಸು ಪ್ರೇರೇಪಿಸುವುದು.

**ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ....**


**ಅಧ್ಯಕ್ಷರು**
ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ(ರಿ), ದ.ಕ.
ಕುಲಾಸೋ ಆಸ್ಪತ್ರೆಯ ಬಳಿ 2ನೇ ಅಡ್ಡ ರಸ್ತೆ, ಬೆಂದೂರ್ ವೆಲ್,
ಮಂಗಳೂರು: 575 002. ದೂರವಾಣಿ ಸಂಖ್ಯೆ: 0824 2439895

**ಅಧ್ಯಕ್ಷರು**
ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ (ರಿ.) ಉಡುಪಿ
ಟಿ.ಎ.ಪಿ.ಸಿ.ಎಂ.ಎಸ್ ಕಟ್ಟಡದ ಎರಡನೇ ಮಹಡಿ, ಪೂರ್ಣ ಪ್ರಜ್ಞಾ ಕಾಲೇಜು ರಸ್ತೆ
ಉಡುಪಿ–576 101. ದೂ.ಸಂ: 0820 2521473

**ಶಿಕ್ಷಣ ಸಂಪನ್ಮೂಲ ಕೇಂದ್ರ ಮಂಗಳೂರು**
ಕುಲಾಸೋ ಆಸ್ಪತ್ರೆಯ ಬಳಿ, ಲೋವರ್ ಬೆಂದೂರ್
2ನೇ ಅಡ್ಡರಸ್ತೆ, ಮಂಗಳೂರು - 575001

**ಶಿಕ್ಷಣ ಸಂಪನ್ಮೂಲ ಕೇಂದ್ರ ಬೆಳ್ತಂಗಡಿ**
ಕಾತ್ಯಾಯಿನಿ ಬಿಲ್ಡಿಂಗ್, 2ನೇ ಮಹಡಿ,
ಮುಖ್ಯ ರಸ್ತೆ, ಬೆಳ್ತಂಗಡಿ - 574214

**ಶಿಕ್ಷಣ ಸಂಪನ್ಮೂಲ ಕೇಂದ್ರ ಪುತ್ತೂರು**
ಕೊಠಡಿ ಸಂಖ್ಯೆ : 25, 1ನೇ ಮಹಡಿ, ಪುರಸಭಾ ವಾಣಿಜ್ಯ ಸಂಕೀರ್ಣ,
KSRTC ಬಸ್ ನಿಲ್ದಾಣ ಬಳಿ, ಪುತ್ತೂರು - 574201

**ಶಿಕ್ಷಣ ಸಂಪನ್ಮೂಲ ಕೇಂದ್ರ ಬಂಟ್ವಾಳ**
ಮೀನಾ ಬಜಾರ್, 2ನೇ ಮಹಡಿ,
ಬಸ್‌ಸ್ಟ್ಯಾಂಡ್ ಹಿಂಬದಿ, ಬಂಟ್ವಾಳ - 574219

**ಶಿಕ್ಷಣ ಸಂಪನ್ಮೂಲ ಕೇಂದ್ರ ಸುಳ್ಯ**
C/o. ಶಿವಕೃಪಾ, ಕಲಾ ಮಂದಿರ
ಖಾಸಗಿ ಬಸ್ ನಿಲ್ದಾಣ ಬಳಿ, ಸುಳ್ಯ - 574 239

**ಶಿಕ್ಷಣ ಸಂಪನ್ಮೂಲ ಕೇಂದ್ರ ಕಾರ್ಕಳ**
C/o. ರವಿ ಶೆಟ್ಟಿ, ಕೆ.ಇ.ಬಿ. ರಸ್ತೆ, ಕಿಸಾನ್ ಸಭಾಭವನದ ಬಳಿ
ಸಾಲ್ಮರ, ಕಾರ್ಕಳ - 576 146.

**ಶಿಕ್ಷಣ ಸಂಪನ್ಮೂಲ ಕೇಂದ್ರ ಕುಂದಾಪುರ**
ಭಗವಾನ್ ಬಿಲ್ಡಿಂಗ್, 1ನೇ ಮಹಡಿ, ಭಗವಾನ್ ರಸ್ತೆ, ಕುಂದಾಪುರ - 576 201

**ಶಿಕ್ಷಣ ಸಂಪನ್ಮೂಲ ಕೇಂದ್ರ ಉಡುಪಿ**
ಟಿ.ಎ.ಪಿ.ಸಿ.ಎಂ.ಎಸ್. ಕಟ್ಟಡದ 2ನೇ ಮಹಡಿ, ಪೂರ್ಣಪ್ರಜ್ಞ ಕಾಲೇಜು ರಸ್ತೆ, ಉಡುಪಿ- 576 101



**ಪ್ರಕಟಣೆ : ಗುಣಾತ್ಮಕ ಶಿಕ್ಷಣಕ್ಕಾಗಿ ಮಗು ಸ್ನೇಹಿ ಸಮಾಜ ನಿರ್ಮಾಣ**
**ಪಡಿ ಮಂಗಳೂರು,** 'ಗಣೇಶ್' ಕುಲಾಸೋ ಆಸ್ಪತ್ರೆಯ ಬಳಿ, ಲೋವರ್ ಬೆಂದೂರ್ 2ನೇ ಅಡ್ಡರಸ್ತೆ, ಮಂಗಳೂರು - 575001.
ದೂರವಾಣಿ : **0824-2439895** **www.padivalored.com**


0-18 ವರ್ಷದೊಳಗಿನ ಸಂಕಷ್ಟದಲ್ಲಿರುವ ಮಕ್ಕಳ ರಕ್ಷಣೆಗಾಗಿ ದಿನದ 24 ಗಂಟೆಗಳಲ್ಲೂ ಇರುವ ಉಚಿತ ತುರ್ತು ದೂರವಾಣಿ ಸಹಾಯ ಕರೆ ವ್ಯವಸ್ಥೆಯಾಗಿದೆ.
**ಚೈಲ್ಡ್‌ಲೈನ್ ಮಂಗಳೂರು ದೂರವಾಣಿ : 1098 (ಉಚಿತ ಕರೆ) : 0824-2437795**

ಚೈಲ್ಡ್ ಲೈನ್ 1098